ಅಧ್ಯಕ್ಷರು : ಉತ್ತರವನ್ನು ನಾನು ತರಿಸಿಕೊಡುತ್ತೇನೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಆಯಿತು.

**(vii) ಹಿರೇಕೆರೂರು ತಾಲ್ಲೂಕು ಅಬಲೂರಿನ ಅಭಿವೃದ್ಧಿ ಕಾರ್ಯಕ್ರಮಗಳು**

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೇ, ವರಕವಿ ಸರ್ವಜ್ಞನ ಜನ್ಮಸ್ಥಳವಾದ ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಅಬಲೂರಿನಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿತ್ತು. ಕೇವಲ ಅಬಲೂರು-ಹಿರೇಕೆರೂರು ಕೂಡುವ ರಸ್ತೆಯಲ್ಲಿ ಮೆಟಲಿಂಗ್ ಮಾಡುವ ಕೆಲಸ ನಡೆದಿದೆ. ಪ್ರವಾಸಿಮಂದಿರದ ಕಾರ್ಯ ಸುಮಾರು ಒಂದು ವರ್ಷದಿಂದ ಸ್ಥಗಿತಗೊಂಡಿದೆ. ಸ್ಮಾರಕಭವನದ ಕೆಲಸ ಇನ್ನೂ ಪ್ರಾರಂಭವೇ ಆಗಿಲ್ಲ. ಹಿರೇಕೆರೂರು-ಅಬಲೂರು ಕೂಡುವ ರಸ್ತೆಯ ಡಾಂಬರೀಕರಣ ಬಗ್ಗೆ ಯಾವುದೇ ಕ್ರಮ ಜರುಗಿಸಿಲ್ಲ. ಕಾರಣ, ಈಗಲಾದರೂ ವರಕವಿ ಸರ್ವಜ್ಞನ ಜನ್ಮಸ್ಥಳವಾದ ಅಬಲೂರಿನ ಅಭಿವೃದ್ಧಿಗೊಳಿಸಲು ಹಾಕಿಕೊಂಡ ಕಾರ್ಯಕ್ರಮಗಳನ್ನು ಬೇಗನೆ ಮಾಡಲು ಮಾನ್ಯ ಲೋಕೋಪಯೋಗಿ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಮಂತ್ರಿ) : ಮಾನ್ಯ ಅಧ್ಯಕ್ಷರೇ, ಸರ್ಕಾರದ ಹೇಳಿಕೆಯು ಈ ರೀತಿ ಇದೆ.

ವರಕವಿ ಸರ್ವಜ್ಞನ ಜನ್ಮಸ್ಥಳವಾದ ಧಾರವಾಡ ಜಿಲ್ಲೆ, ಹಿರೇಕೆರೂರು ತಾಲ್ಲೂಕಿನ ಅಬಲೂರಿನಲ್ಲಿ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗುತ್ತಿದೆ:

**1. ಹಿರೇಕೆರೂರ – ಅಬಲೂರ – ಕೂಡು ರಸ್ತೆ :**

ಈ ರಸ್ತೆಯ 6 ಕಿ.ಮೀ. ಗೆ ಜಲ್ಲಿ ಹಾಕಲಾಗಿದೆ. ಇನ್ನುಳಿದ 2 ಕಿ.ಮೀ.ಗೆ ಜಲ್ಲಿ ಹಾಕುವ ಕಾಮಗಾರಿಯು ಮುಂದುವರೆಯುತ್ತಿದೆ. ಈ ಕಾಮಗಾರಿಯನ್ನು ಒಟ್ಟು 10 ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೊಳ್ಳಲಾಗಿದೆ. ಡಾಂಬರೀಕರಣವನ್ನು ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

**2. ಸ್ಮಾರಕ ಭವನ :**

ಈ ಕಾಮಗಾರಿಯನ್ನು 2 ಲಕ್ಷ ರೂ.ಗಳ ಅಂದಾಜಿನಲ್ಲಿ ತೆಗೆದುಕೊಳ್ಳಲಾಗಿದೆ. ಈ ಕಾಮಗಾರಿಗೆ ಯಾರೂ ಗುತ್ತಿಗೆದಾರರು ಮುಂದೆ ಬರಲಿಲ್ಲ. ಆದ್ದರಿಂದ ನಿಯಮಗಳಂತೆ ಇಲಾಖಾ ವತಿಯಿಂದ ತೆಗೆದುಕೊಳ್ಳಲಾಗುತ್ತದೆ. ಹಾಗೂ ಈ ಸಾಲಿನಲ್ಲಿ ನಿಗದಿಪಡಿಸಿರುವ 1 ಲಕ್ಷ ರೂ.ಗಳ ಅನುದಾನವನ್ನು ಉಪಯೋಗಿಸಲಾಗುವುದು.

**3. ಪ್ರವಾಸಿ ಮಂದಿರ :**

ಈ ಕಾಮಗಾರಿಯನ್ನು 10 ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೊಳ್ಳಲಾಗಿದೆ. ಇದಕ್ಕೂ ಸಹ ಗುತ್ತಿಗೆದಾರರು ಬರದಿದ್ದುದರಿಂದ ಕಾಮಗಾರಿಯನ್ನು ಇಲಾಖಾವತಿಯಿಂದ ಕೈಗೊಂಡಿದ್ದು ನೆಲಮಟ್ಟದವರೆಗೂ ಕಾಮಗಾರಿಯು ಆಗಿದೆ. ಈ ಸಾಲಿನಲ್ಲಿ ನಿಗದಿಪಡಿಸಿರುವ 5 ಲಕ್ಷ ರೂ. ಅನುದಾನವನ್ನು ಉಪಯೋಗಿಸಿಕೊಳ್ಳಲಾಗುವುದು.

**4. ಕಾಂಪೌಂಡ್ ಗೋಡೆ ನಿರ್ಮಾಣ :**

ಈ ಕಾಮಗಾರಿಯನ್ನು 2ಲಕ್ಷ ರೂ.ಗಳ ಅಂದಾಜಿನಲ್ಲಿ ಕೈಗೊಂಡಿದ್ದು ಕಾಮಗಾರಿಯು ಮುಂದುವರಿದಿದೆ. ಈ ಸಾಲಿನಲ್ಲಿ ನಿಗದಿಪಡಿಸಿದ 1 ಲಕ್ಷ ರೂ.ಗಳ ಅನುದಾನವನ್ನು ಉಪಯೋಗಿಸಿಕೊಳ್ಳಲಾಗುವುದು.

1.30 ಪಿ.ಎಂ.

(ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಸಭಾಧ್ಯಕ್ಷರ ಪೀಠದಲ್ಲಿ ಉಪಸ್ಥಿತರಾದರು)

**(viii) ಗುಬ್ಬಿ ತಾಲ್ಲೂಕು, ಹೊಸಕೆರೆಗೆ ಬಾಲಕಿಯರ ಪ್ರೌಢಶಾಲೆ ಮಂಜೂರು**

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಸಭಾಧ್ಯಕ್ಷಿಣಿಯರೇ, ಶ್ರೀ ಎಂ.ಐ.ಜಿ. ಎಜುಕೇಷನ್ ಸೊಸೈಟಿ, ರಿಜಿಸ್ಟರ್ಡ್, ಓಬಳಾಪುರ ಗುಬ್ಬಿ ತಾಲ್ಲೂಕು, ತುಮಕೂರು ಜಿಲ್ಲೆ ಇವರು ಗುಬ್ಬಿ ತಾಲ್ಲೂಕು, ಹೊಸಕೆರೆಯಲ್ಲಿ ಬಾಲಕಿಯರ ಪ್ರೌಢಶಾಲೆ ಮಂಜೂರ್ಮಾಡುವಂತೆ ಹಲವಾರು ಬಾರಿ ಕೋರಿದರೂ ಕೂಡ, ಇದುವರೆಗೆ ಮಂಜೂರಾಗಿರುವುದಿಲ್ಲ. ಇದನ್ನು ಸನ್ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಎಸ್.ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) : ಮಾನ್ಯ ಸಭಾಧ್ಯಕ್ಷಿಣಿಯರೇ, ಪ್ರೌಢ ಶಿಕ್ಷಣ ಸಚಿವರು, ಮೇಲ್ಮನೆಗೆ ಹೋಗಿರುವುದರಿಂದ, ಅವರು ಬಂದನಂತರ, ಸರ್ಕಾಕರದ ಉತ್ತರವನ್ನು ತರಿಸಿಕೊಡಲಾಗುವುದು.

## ಗಮನ ಸೆಳೆಯುವ ಸೂಚನೆಗಳು

**ಹುಬ್ಬಳ್ಳಿ-ಧಾರವಾಡ ನಗರದ ಜನತೆಯು ತೀವ್ರತರವಾದ ಕುಡಿಯುವ ನೀರಿನ ತೊಂದರೆಯನ್ನು ಎದುರಿಸುತ್ತಿರುವ ಬಗ್ಗೆ**

+ಶ್ರೀ ಅಶೋಕ್ ಕಾಟ್ವೆ (ಹುಬ್ಬಳ್ಳಿ) : ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ಕೆಲವೊಂದು ವರ್ಷಗಳಿಂದ ನೀರಿನ ತೀವ್ರ ಅಭಾವದಿಂದ ಜನರು ಪರಿತಪಿಸುತ್ತಿದ್ದಾರೆ. ಹುಬ್ಬಳ್ಳಿ ಧಾರವಾಡ ಮಹಾನಗರಕ್ಕೆ ಸಂಬಂಧಿಸಿದಂತೆ 4 ಕೆರೆಗಳು ಇವೆ. ನೀರು ಸಾಗರ, ಉಣಕಲ್, ಗುಡಿದಾಳ್ ಮತ್ತು ಮಲಪ್ರಭಾದಿಂದ ನೀರು ಬರುತ್ತದೆ. ಮಲಪ್ರಭಾ ನೀರು ಸಾಗರದಿಂದ 90 ಲಕ್ಷ ಗ್ಯಾಲನ್ ನೀರು ಬರುತ್ತದೆ. ಮಲಪ್ರಭಾ ಮೊದಲನೇ ಹಂತದಿಂದ 75 ಲಕ್ಷ ಗ್ಯಾಲನ್, ಎರಡನೇ ಹಂತದಿಂದ 75 ಲಕ್ಷ ಗ್ಯಾಲನ್ ಒಟ್ಟು 150 ಲಕ್ಷ ಗ್ಯಾಲನ್ ಬರುತ್ತದೆ. ಉಣಕಲ್ ಕಡೆಯಿಂದ 10 ಲಕ್ಷ ಗ್ಯಾಲನ್ ನೀರು ಬರುತ್ತದೆ. ಇಷ್ಟು ಬಂದರೂ ಸಹಿತ ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ವಾರಕ್ಕೆ ಮೂರು ದಿವಸ ಮಾತ್ರ ನೀರು ಕೊಡುತ್ತಾರೆ.

ಚೇರ್ಮನ್ : ತಾವು ಮೊದಲು ಮಂತ್ರಿಗಳ ಗಮನ ಸೆಳೆಯಬೇಕು, ಮಂತ್ರಿಗಳು ಉತ್ತರ ಕೊಟ್ಟನಂತರ ಮತ್ತೆ ತಾವು ಪ್ರಶ್ನೆ ಕೇಳಬೇಕು.

ಶ್ರೀ ಅಶೋಕ್ ಕಾಟ್ವೆ : ಹುಬ್ಬಳ್ಳಿ-ಧಾರವಾಡ ನಗರದ ಜನತೆಯು ತೀವ್ರ ತರವಾದ ಕುಡಿಯುವ ನೀರಿನ ತೊಂದರೆಯನ್ನು ಎದುರಿಸುತ್ತಿರುವ ಬಗ್ಗೆ ನಗರಾಭಿವೃದ್ಧಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಸಭಾಧ್ಯಕ್ಷಿಣಿಯವರೇ,

ಹುಬ್ಬಳ್ಳಿ-ಧಾರವಾಡ ಮಹಾನಗರದ ಜನಸಂಖ್ಯೆಯು 1991ರ ಜನಗಣತಿಯ ಪ್ರಕಾರ 6,17,510 ಇದ್ದು ಈಗಿನ ಜನಸಂಖ್ಯೆ : ಸುಮಾರು 7.60 ಲಕ್ಷಗಳು ಇರಬಹುದು. ಈ ಅವಳಿ ನಗರಗಳಿಗೆ ನೀರಸಾಗರ ಜಲಾಶಯ ಮತ್ತು ಮಲಪ್ರಭಾ ಜಲಾಶಯಗಳಿಂದ ನೀರನ್ನು ಸರಬರಾಜು ಮಾಡುವ ವ್ಯವಸ್ಥೆ ಇರುತ್ತದೆ. ಈ ಸ್ಥಾವರಗಳನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ನಿರ್ವಹಿಸುತ್ತಿದ್ದು ನೀರನ್ನು ಸಗಟಾಗಿ ಮಹಾನಗರ ಪಾಲಿಕೆಯು ನಿರ್ವಹಿಸುತ್ತದೆ. ಉಣಕಲ್ ಕೆರೆಯಿಂದಲೂ